# ಶಿಕ್ಷಣದ ಜೊತೆಗೆ ಜನಪದ, ರಂಗಭೂಮಿ ಆಸಕ್ತಿ ಬೆಳಸಿ

**ಬೆಂಗಳೂರು:** ಶಿಕ್ಷಣದ ಜೊತೆಜೊತೆಯಲ್ಲೆ ಸಾಂಸ್ಕೃತಿಕತೆ ಜನಪದ ಕಲೆ ರಂಗಭೂಮಿ ಆಸಕ್ತಿ ಮೂಡುವಂತೆ ವಿದ್ಯಾರ್ಥಿಗಳಲ್ಲಿ ಕಲಿಯುವ ಮನೋಭಾವ ಹೆಚ್ಚಿಸಬೇಕು ಚಿತ್ರನಟ ನೆನಪಿರಲಿ ಪ್ರೇಮ್ ತಿಳಿಸಿದರು.

ನಗರದ ಬನ್ನೂರು ರಸ್ತೆಯಲ್ಲಿರುವ ಎಟಿಎಂಇ ಇಂಜಿನಿಯರ್ ಕಾಲೇಜಿನ ವಾರ್ಷಿಕ ಸಾಂಸ್ಕೃತಿಕ ಹಬ್ಬ ಕಾರ್ಯಕ್ರಮದಲ್ಲಿ ಭಾಗಿಯಾಗಿ ಚಿತ್ರ ನಟ ನೆನಪಿರಲಿ ಪ್ರೇಮ್ ಮಾತನಾಡಿ ಕಾಲೇಜು ಎಂದರೆ ಶಿಕ್ಷಣದ ಜೊತೆ ಜೊತೆಯಲ್ಲೆ ಸಾಂಸ್ಕೃತಿಕತೆ ಜನಪದ ಕಲೆ ರಂಗಭೂಮಿ ಆಸಕ್ತಿ ಮೂಡುವಂತೆ ವಿದ್ಯಾರ್ಥಿಗಳಲ್ಲಿ ಕಲಿ ಯುವ ಮನೋಭಾವ ಹೆಚ್ಚಿಸಬೇಕು ಅದಕ್ಕೆ ಎಟಿಎಮ್ಇ ಶಿಕ್ಷಣ ಸಂಸ್ಥೆ ಸಾಕ್ಷಿಯಾಗಿದೆ ಎಂದು ಶ್ಲಾಘಿಸಿದರು.

ಚಿತ್ರರಂಗದಲ್ಲಿ ನಟನಟಿಯರು ನಿರ್ದೇಶಕ ನಿತ್ಮಾಪಕರು ಹೆಚ್ಚಾಗಿ ಇಂಜಿನಿಯರಿಂಗ್ ವ್ಯಾಸಾಂಗ ಮಾಡಿ ಬಂದವರು ಎಂಬ ಪ್ರತೀತಿಯಿದೆ ಮುಂದಿನ ದಿನದಲ್ಲಿ ಎನ್.ಟಿ.ಎಮ್.ಇ ಯುವ ಕಲಾವಿದರ ಪ್ರತಿಭೆಗೆ ನಾನು ಪ್ರೋತ್ಸಾಹ ನೀಡುತ್ತೇನೆ ಮತ್ತೊಮ್ಮೆ ನಾನು ಕಾಲೇಜಿನ ವಾರ್ಷಿಕ ಆಚರಣೆಗೆ ಬರುತ್ತೇನೆ ಎಂದು ಸಂತಸ ವ್ಯಕ್ತಪಡಿಸಿದರು.



ಸಮಾಜ ಸೇವಕರಾದ ಬನ್ನೂರು ಮಹೇಂದ್ರಸಿಂಗ್ ಕಾಳಪ್ಪ ರವರ ಸಾಮಾಜಿಕ ಸೇವೆಯನ್ನು ಸ್ಲಾಗಿಸಿದರು. ಇದೇ ಸಂದರ್ಭದಲ್ಲಿ ಅನಾರೋಗ್ಯದಿಂದ ಬಳಲುತ್ತಿರುವ ಕಾಲೇಜು ವತಿಯಿಂದ ಸಹಾಯಧನ ಮಾಡಿದರು.

ಇದೆ ಸಂದರ್ಭದಲ್ಲಿ ನೆನಪಿರಲಿ ಪ್ರೇಮ್ ಅವರ ಪತ್ನಿ ಜ್ಯೋತಿ ಪ್ರೇಮ್, ಗೌರವ ಅತಿಥಿಗಳಾಗಿ ಸೈಕಲ್ ಪ್ಯೂರ್ ಅಗರಬತ್ತಿ ಸಂಸ್ಥೆಯ ಅಧ್ಯಕ್ಷರಾದ ಆರ್ ಗುರು, ಕೃಷ್ಣ ಗ್ರೂಪ್ಸ್ ಆಫ್ ಹಾಸ್ಪಿಟಲ್ ಮ್ಯಾನೇಜಿಂಗ್ ಟ್ರಸ್ಟಿ ಡಾ. ಸುರೇಶ್ ಶೆಟ್ಟಿ, ಸಮಾಜ ಸೇವಕರಾದ ಬನ್ನೂರು ಡಾ. ಮಹೇಂದ್ರಸಿಂಗ್ ಕಾಳಪ್ಪ, ರಾಜ್ಯ ಸರ್ಕಾರದ ಆಯುರ್ವೇದ ಸೆಂಟರ್‌ನ ಸಹಾಯಕ ನಿರ್ದೇಶಕ ಡಾ. ಲಕ್ಷ್ಮೀನಾರಾಯಣ್ ಶೆಣೈ ಭಾಗವಹಿಸಿ, ಕಾರ್ಯಕ್ರಮ ಅಧ್ಯಕ್ಷತೆಯನ್ನು ಎಟಿಎಂಇ ಇಂಜಿನಿಯರಿಂಗ್ ಕಾಲೇಜಿನ ಅಧ್ಯಕ್ಷ ಎಲ್ ಅರುಣ್ ಕುಮಾರ್ ವಹಿಸಿದ್ದರು, ಕಾಲೇಜಿನ ಆಡಳಿತ ಮಂಡಳಿ ಕಾರ್ಯದರ್ಶಿ ಕೆ ಶಿವಶಂಕರ್, ಖಜಾಂಜಿ ಆರ್ ವೀರೇಶ್, ಪ್ರಾಂಶುಪಾಲ ಡಾ. ಎಲ್ ಬಸವರಾಜ್, ಉಪನ್ಯಾಸಕರಾದ ರೋಹಿತ್, ಶಾರದಾದೇವಿ ಭಾಗವಹಿಸಿದ್ದರು.